ಶ್ರೀ ಷಫಿ ಅಹಮಂದ್.—ಕಳೆದ ಎಂಟು ವರ್ಷಗಳಿಂದ ಇದೇ ರೀತಿ ನಡೆಯುತ್ತಿದೆ, ಪಾನ್ಯ ಸಚಿವೆಯವರು ಇದರ ಬಗ್ಗೆ ತೀವ್ರವಾಗಿ ಗಮನಿಸಿ ಆದಷ್ಟೂ ಬೇಗ, ಅತಿ ಶೀಘ್ರದಲ್ಲಿ ಭರ್ತಿ ಮಾಡಿದರೆ ಸೂಕ್ತ ಎಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಬಗ್ಗೆ ನಿಮಗಿಂತ ನಮಗೆ ಆಸೆ ಇದೆ. ಅತೀ ಶೀಘ್ರವಾಗಿ ಮಾಡಿಕೊಡುತ್ತೇನೆ.

(೨) ಗೋವಾ ಫೆನ್ನಿ ಕಳ್ಳಸಾಗಾಣಿಕೆಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಕಾಲ್ ಅಟೆನ್‌ಷನ್‌ನ್ನು ಪಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೆ. ಇದರಲ್ಲಿ ಗೃಹ ಇಲಾಖೆ, ಎಕ್ಸೈಸ್ ಇಲಾಖೆ ಎರಡೂ ಇನ್‌ವಾಲ್ವ್ ಆಗಿದೆ. ಇಲ್ಲಿ ಎಕ್ಸೈಜ್ ಇಲಾಖೆಯ ಅಧಿಕಾರಿಗಳ ಮೇಲೆ ಅಸಾಲ್ಟ್ ಆಗಿದೆ, it is due to the in action on the part of the Home Minister.

ಅಧ್ಯಕ್ಷರು.—ಅವರು ಏತಕ್ಕೆ ಅಸಾಲ್ಟ್ ಆಯಿತೆಂದು ಹೇಳುತ್ತಾರೆ. ಇವರು ಏನು ಮಾಡ ಬೇಕೆಂದು ಹೇಳುತ್ತಾರೆ.

SRI S. BANGARAPPA.—I have no objection.

SRI R. V. DESHAPANDE.—Any way the subject matter is the same. It is an important matter ಅಲ್ಲಿ ಒಂದು ಕೊಲೆ ಆಗಿದೆ. ೫೦ ಜನ ಇಂಜುರ್ ಆಗಿದ್ದಾರೆ. ೧೦ ಜನ ಎಕ್ಸೈಸ್ ಆಫಿಷಿಯಲ್ಸ್ ಇಂಜುರ್ ಆಗಿದ್ದಾರೆ.

MR. SPEAKER.—Fortunately the Chief Minister is also here.

SRI S. BANGARAPPA.—Before Hon. Member calls attention, what I feel is that there are two aspects. ಮೊದಲು ರೈಡ್ ವಗೈರೆ ವಿಚಾರ ಅಬಕಾರಿ ಸಚಿವರ ವ್ಯಾಪ್ತಿಗೆ ಬರುತ್ತದೆ. The matter has ended in scuffle resulting in the death of one or two persons who were working there. ಇದು ಹೋಮ್ ಮಿನಿಸ್ಟರ್ ಧರ್ಮಸಿಂಗ್‌ರವರ ವ್ಯಾಪ್ತಿಗೆ ಬರುತ್ತದೆ. ಆದುದರಿಂದ ಸಾಮಾನ್ಯವಾಗಿ ಅವರು ಯಾವ ವಿಚಾರ ಕೇಳುತ್ತಾರೆ ಎಂದು ಗೊತ್ತಾದರೆ ಅದಕ್ಕೆ ಪ್ರತ್ಯೇಕವಾಗಿ ಹೇಳಿಕೆ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. Are you interested in knowing something about the murder or some injuries that have been caused to some persons ? ಇದು ಸ್ವಲ್ಪ ವೇಗ ಆಗಿದೆ. ಆದ್ದರಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಗೋವಾ ಫೆನ್ನಿ ಕಳ್ಳಸಾಗಾಣಿಕೆಯಿಂದ ಉಂಟಾಗಿರುವ ಗಂಭೀರ ಪರಿಸ್ಥಿತಿ ಎಂದು ಇದೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಉತ್ತರ ಗೃಹ ಸಚಿವರು ಕೊಡುವುದು ಒಳ್ಳೆಯದು ಅಲ್ಲವೇ ?

MR. SPEAKER.—Do you direct your calling attention to the Home Minister or ...

SRI R.V. DESHPANDE.—To the Home Minister. A grave situation has arisen in North Kanara District particularly in Karwar and other places where arson and clashes have taken due to smuggling of Goa feni. Prohibitory order is also promulgated. The situation in this place is a matter of urgent public importance. Hence it should be taken up for discussion.

ಶ್ರೀ ಎಸ್. ಬಂಗಾರಪ್ಪ.—ಈಗ ನಾವು ಉತ್ತರವನ್ನು ಸಿದ್ಧ ಮಾಡಬೇಕಾಗುತ್ತದೆ. ನಾಳೆ ಅಥವಾ ನಾಳೆದ್ದು ಉತ್ತರ ಕೊಡುತ್ತೇವೆ.

MR. SPEAKER.—I will transfer it to the Home Minister.

ಶ್ರೀ ಧರ್ಮಸಿಂಗ್.—ಸರ್ಕಾರದ ವತಿಯಿಂದ ಉತ್ತರ ಕೊಡುತ್ತೇವೆ. ಮುತ್ತೆ ಹಾಗೇನಾದರೂ ಆಗಿದ್ದರೆ ಹೇಳಿಬಿಡಿ, We will take action.

MR. SPEAKER.—Now we will take up matter under 334.

ನಿಯಮ ೩೩೪ರ ಮೇರೆಗೆ

(ಶ್ರೀ ಹೆಚ್. ಎಂ. ರೇವಣ್ಣ ಮತ್ತು ಶ್ರೀ ದಯಾನಂದರಾವ್‌ರವರು ಗೈರು ಹಾಜರಿದ್ದರು)

ಬೆಂಗಳೂರಿನ ಚಿಕ್ಕಪೇಟೆಯ ವಿಧಾನ ಸಭಾ ಕ್ಷೇತ್ರದಲ್ಲಿ ಕೆ. ಎಂ.ಎಫ್. ಬೂತುಗಳನ್ನು ಸ್ಥಾಪಿಸುವುದು

ಶ್ರೀ ಪೆರೀಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಬೆಂಗಳೂರು ಡೈರಿ ಮತ್ತು ಕೆ. ಎಂ. ಎಫ್. ಮದರ್ ಡೈರಿ ಬೂತ್‌ಗಳ ಕೊರತೆ ಇದ್ದು ಇದರಿಂದ ಈ ಕ್ಷೇತ್ರದ ನಿವಾಸಗಳಿಗೆ ಬಹಳ ತೊಂದರೆಯಾಗಿದೆ. ಜನರು ಹಾಲನ್ನು ಕೊಂಡು ಕೊಳ್ಳಲು ಬಹಳ ದೂರ ಹೋಗಬೇಕಾದ ಪರಿಸ್ಥಿತಿ ಇದೆ. ಅಲ್ಲದೆ ಈಗ ಇರತಕ್ಕ ಹಾಲಿ ಒಂದೇ ಒಂದು ಬೂತ್ ಮುಂದೆ ಜನ ಬಹಳ ಸಮಯ ಕ್ಯೂ ನಿಂತುಕೊಳ್ಳತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದವರು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಕೆಲವು ಬೆಂಗಳೂರು ಡೈರಿ ಹಾಗೂ ಕೆ. ಎಂ. ಎಫ್. ಮದರ್ ಡೈರಿ ಬೂತ್‌ಗಳನ್ನು ಪ್ರಾರಂಭಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರ ಕೊಡುವುದಕ್ಕೆ ಬದಲಾಗಿ ನಾನು ಹೇಳಿ ಬಿಡುತ್ತೇನೆ. ಹೋದ ಅಧಿವೇಶನದಲ್ಲಿ ಅವರ ಕ್ಷೇತ್ರದಲ್ಲಿ ಈ ಒಂದು ಹಾಲಿನ ಬೂತ್‌ಗಳನ್ನು ತೆರೆಯಲು ಆಶ್ವಾಸನೆ ಕೊಟ್ಟಿದೆ. ನಾನು ಅಧಿಕಾರಿಗಳನ್ನು ವಿಚಾರ ಮಾಡಿದಾಗ ಅವರು ನನಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅಲ್ಲಿ ಹೋಗುವುದಂ, ಇಲ್ಲಿ ಹೋಗುವುದು ಮಾಡುತ್ತಿದ್ದಾರೆ. ತಡವಾಗಿ ಮಾಡಿದ್ದಾರೆ. ನಾನು ಅವರನ್ನು ಬೈದು ಕಳುಹಿಸಿದ್ದೇನೆ. ಈಗ ನಾನು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ದಯಮಾಡಿ ಅವರು ಬಂದು ನನ್ನನ್ನು ನೋಡಿದರೆ ಮುಂದಿನ ಕೆಲಸ ನಾನು ಮಾಡುತ್ತೇನೆ.

(ii) ಬೈಲಹೊಂಗಲ ತಾಲ್ಲೂಕಿನ ಒಕ್ಕುಂದ ಗ್ರಾಮಕ್ಕೆ ಕುಡಿಯಲುವ ನೀರಿನ ಸೌಕರ್ಯ

ಶ್ರೀ ಶಿವಾನಂದ ಎಚ್ ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಬೈಲ ಹೊಂಗಲ ತಾಲ್ಲೂಕು ಪೈಕಿ ಒಕ್ಕುಂದ ಗ್ರಾಮದಲ್ಲಿ ಬಹಳ ಹಿಂದೆ ಕುಡಿಯುವ ನೀರಿನ ಸಲುವಾಗಿ ಪೈಪ್ಡ್ ವಾಟರ್ ಸ್ಕೀಮ್‌ಗಳನ್ನು ಪ್ರಾರಂಭಿಸಿರುತ್ತಾರೆ. ಇವು ಗನ್‌ಲೈಟ್ ಪೈಪುಗಳನ್ನು ಹಾಕಿರುವುದರಿಂದ ಪೈಪುಗಳು ತುಕ್ಕು ಹಿಡಿದು ಹಾಳಾಗಿರುವುದರಿಂದ ಇವುಗಳನ್ನು ಬದಲಾಯಿಸಿ ಪ್ಲಾಸ್ಟಿಕ್ ಪೈಪುಗಳನ್ನು ಹಾಕಬೇಕೆಂದು ವಿನಂತಿ. ಜೊತೆಗೆ ಈ ಗ್ರಾಮದ ನೇಕಾರರ ಓಣಿಯಲ್ಲಿ ಇದುವರೆವಿಗೂ ನೀರಿನ ಸೌಕರ್ಯವಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಅಲ್ಲಿಗೆ ನೀರಿನ ಸೌಕರ್ಯವನ್ನು ಒದಗಿಸಬೇಕೆಂದು ವಿನಂತಿ ಈ ಊರಲ್ಲಿ ಮೊದಲು ತೆರೆದ ಬಾವಿ ನೀರು ಸಂಪೂರ್ಣವಾಗಿ ಕಡಿಮೆಯಾಗಿದ್ದು ಜನರಿಗೆ ಬಹಳ ತೊಂದರೆಯಾಗಿದೆ. ಈ ಬಗ್ಗೆ ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಅವರು ಈ ಕೆಲಸವನ್ನು ಕಾಡಾ ಹಣದಿಂದ ಮಾಡಿಸಬೇಕೆಂದು ಕೇಳಿರುತ್ತಾರೆ. ಏಕೆಂದರೆ ಇವು ಮುಳುಗಡೆ ಪ್ರದೇಶದಲ್ಲಿ ಬರುತ್ತಿದ್ದು ಕಾಡಾದವರು ಯಾವುದೇ ವಾಟರ್ ಸಪ್ಲೈ ಪೂರ್ಣ ಮಾಡಿರುವುದಿಲ್ಲ. ಜಿಲ್ಲಾ ಪರಿಷತ್ತಿನವರು ಚೀಫ್ ಇಂಜಿನೀಯರ್ ಇರಿಗೇಶನ್ ನಾರ್ತ್ ಮಲಪ್ರಭಾ ಪ್ರಾಜೆಕ್ಟ್ ಬೆಳಗಾಂ ಇವರಿಂದ ಮಾಡಿಸಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಆಗಮೆಂಟೇಶನ್‌ನಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ.

ಶ್ರೀ ಬಿ. ಬಸವಲಿಂಗಪ್ಪ.—ಈ ಸಲಹೆ ಬಹಳ ಸೂಕ್ತವಾಗಿದೆ, ನಾವು ಮಾಡುತ್ತೇವೆ.